**ಸಾಕ್ಷಿಯನ್ನು ದಿನಾಂಕ 13.01.2025 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**<u>ಪಾಟೀ ಸವಾಲುಃ</u> 2 ನೇ ಎದುರುದಾರರ ಪರ ವಕೀಲರಿಂದ**

ಅಪಘಾತ ಕಾಲಕ್ಕೆ ಕಾರ್ ನಂಬರ್ ಕೆಎ-25/ಝಡ್-1315 ಅನ್ನು ನಾನೇ ಚಲಾಯಿಸುತ್ತಿದ್ದೆ ಅಂದರೆ ಸರಿ. ಸದರಿ ಕಾರಿನ ಮಾಲೀಕ ನಾನೇ ಅಂದರೆ ಸರಿ. ನನ್ನ ಚಾಲನಾ ಪರವಾನಿಗೆ ಮತ್ತು ಕಾರಿನ ಆರ್.ಸಿ ಅನ್ನು ಈ ಪ್ರಕರಣದಲ್ಲಿ ನಾನು ಹಾಜರುಪಡಿಸಿರುವುದಿಲ್ಲ. ಅಪಘಾತ ದಿಃ23-2-2019 ರಂದು ಆಗಿರುತ್ತದೆ ಅಂದರೆ ಸರಿ. ಒಂದು ದಿನ ತಡವಾಗಿ ಅಪಘಾತದ ಬಗ್ಗೆ ದೂರು ದಾಖಲಾಗಿರುತ್ತದೆ ಅಂದರೆ ಸರಿ. 1 ನೇ ಎದುರುದಾರರ ವಾಹನದಿಂದ ಅಪಘಾತವಾಗಿರುತ್ತದೆ ಎಂದು 1 ದಿನ ತಡವಾಗಿ ಸುಳ್ಳು ದೂರನ್ನು ನೀಡಿರುತ್ತೇವೆ ಅಂದರೆ ಸರಿಯಲ್ಲ. 1 ನೇ ಎದುರುದಾರರ ಟಿಪ್ಪರ್ ವಾಹನ 2 ನೇ ಎದುರುದಾರ ಕಂಪನಿಯ ವಿಮೆಗೆ ಒಳಪಟ್ಟಿಲ್ಲ ಮತ್ತು ಅರ್ಜಿಯಲ್ಲಿ ನಮೂದಿಸಿರುವ ಪಾಲಿಸಿ ನಂಬರ್ 773721823350000359 ಅನ್ನು 2 ನೇ ಎದುರುದಾರರು 1 ನೇ ಎದುರುದಾರರಿಗೆ ನೀಡಿರುವುದಿಲ್ಲ ಅಂದರೆ ಸರಿಯಲ್ಲ.

ಅಪಘಾತ ಕಾಲಕ್ಕೆ ನನಗೆ 47 ವರ್ಷ ವಯಸ್ಸಾಗಿದ್ದು, ನಾನು ಖಾಸಗಿ ಕೆಲಸ ಮಾಡುತ್ತಿದ್ದು ತಿಂಗಳಿಗೆ ರೂ.25,000/- ಆದಾಯ ಗಳಿಸುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಉದ್ಯೋಗ, ಆದಾಯ ಮತ್ತು ವಯಸ್ಸಿಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ಯಾವುದೇ ಕೆಲಸ ಮಾಡುತ್ತಿರಲಿಲ್ಲದ ಕಾರಣ ನಾನು ಕೆಲಸ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಅಂದರೆ ಸರಿಯಲ್ಲ.

ಅಪಘಾತ ಲಾರಿ ನಂಬರ್ ಟಿ.ಎನ್-36/ಎಕ್ಯೂ-2557 ರ ಚಾಲಕನ ತಪ್ಪಿನಿಂದ ಆಗಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅಪಘಾತ ಕಾಲಕ್ಕೆ ನನಗೆ ಸರಿಯಾಗಿ ಡಿ.ಎಲ್ ಇಲ್ಲದಿದ್ದೂ ಮತ್ತು ವಾಹನಕ್ಕೆ ಆರ್.ಸಿ ಇಲ್ಲದಿದ್ದೂ ನನ್ನ ತಪ್ಪಿನಿಂದ ಅಪಘಾತ ಆಗಿರುತ್ತದೆ ಅಂದರೆ ಸರಿಯಲ್ಲ. ಅಪಘಾತ ಡಾಂಬರ್ ರಸ್ತೆಯ ಮೇಲೆ ಆಗಿರುತ್ತದೆ. ಅಪಘಾತದಲ್ಲಿ ಎರಡೂ ವಾಹನಗಳು ಮುಖಾಮುಖಿಯಾಗಿ ಡಿಕ್ಕಿ ಹೊಡೆದಿರುತ್ತವೆ ಅಂದರೆ ಸರಿ. ಅಪಘಾತದ ಬಗ್ಗೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಅಪಘಾತದ ನಂತರ ನನ್ನನ್ನು ಸಿ.ಹೆಚ್.ಸಿ ಕಿತ್ತೂರಿಗೆ ದಾಖಲೆ ಮಾಡಿದ್ದಾಗಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅಲ್ಲಿ ಪ್ರಥಮ ಚಿಕಿತ್ಸೆ ಪಡೆದು ಹೆಚ್ಚುವರಿ ಚಿಕಿತ್ಸೆಗಾಗಿ ಎಸ್.ಡಿ.ಎಂ ಆಸ್ಪತ್ರೆ ಧಾರವಾಡದಲ್ಲಿ ದಾಖಲಾಗಿದ್ದಾಗಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅಪಘಾತಕ್ಕೆ ಸಂಬಂಧಿಸಿದಂತೆ ಎಂ.ಎಲ್.ಸಿ ನೋಂದಣಿಯಾಗಿರುವುದಿಲ್ಲ ಅಂದರೆ ಸರಿ. ಅಪಘಾತದಲ್ಲಿ ನನಗೆ ಯಾವುದೇ ಗಾಯಗಳು ಆಗಿರದ ಕಾರಣ ಎಂ.ಎಲ್.ಸಿ ನೋಂದಣಿಯಾಗಿರುವುದಿಲ್ಲ ಅಂದರೆ ಸರಿಯಲ್ಲ. ನಿ.ಪಿ.6 ಖೊಟ್ಟಿಯಾಗಿ ಸೃಷ್ಟಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ನಿ.ಪಿ.6 ರ ಪ್ರಕಾರ ನನಗೆ ಯಾವುದೇ ಮೂಳೆ ಮುರಿತದ ಗಾಯ ಉಂಟಾಗಿರುವುದಿಲ್ಲ ಅಂದರೆ ಸರಿ. ನಿ.ಪಿ.6 ರ ಪ್ರಕಾರ ನನಗೆ ಆದ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳು ಅಂದರೆ ಸರಿ. ನಾನು ಎಸ್.ಡಿ.ಎಂ ಆಸ್ಪತ್ರೆ ಧಾರವಾಡದಲ್ಲಿ ಹೆಚ್ಚುವರಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ಯಾವುದೇ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಅಂದರೆ ಸರಿ.

ನಾನು ಚಿಕಿತ್ಸೆಗಾಗಿ ಮತ್ತು ಆಸ್ಪತ್ರೆ ಖರ್ಚಿಗಾಗಿ ರೂ.1,50,000/- ಖರ್ಚು ಮಾಡಿದ್ದಾಗಿ ಯಾವುದೇ ಆಧಾರವಿಲ್ಲದೇ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅಪಘಾತದ ಗಾಯಗಳಿಂದ ನನಗೆ ಶಾಶ್ವತ ಅಂಗನ್ಯೂನತೆ ಉಂಟಾಗಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅಪಘಾತದಿಂದ ನನಗೆ ಕೆಲಸ ಮಾಡಲು ಆಗುತ್ತಿಲ್ಲದಿದ್ದು ನನಗೆ ಯಾವುದೇ ಆದಾಯದ ಮೂಲ ಇರುವುದಿಲ್ಲ ಎಂದು ಯಾವುದೇ ಆಧಾರವಿಲ್ಲದೇ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಅಪಘಾತ ಕಾಲಕ್ಕೆ ಟಿಪ್ಪರ್ ಚಾಲಕನಿಗೆ ಚಾಲನಾ ಪರವಾನಿಗೆ ಇರಲಿಲ್ಲ ಮತ್ತು ವಾಹನಕ್ಕೆ ಎಫ್.ಸಿ ಮತ್ತು ಪರ್ಮಿಟ್ ಇರಲಿಲ್ಲ ಅಂದರೆ ನನಗೆ ಗೊತ್ತಿಲ್ಲ. 2 ನೇ ಎದುರುದಾರರು 1 ನೇ ಎದುರುದಾರರ ವಾಹನಕ್ಕೆ ಯಾವುದೇ ವಿಮೆ ನೀಡದ ಕಾರಣ 2 ನೇ ಎದುರುದಾರರ ವಿರುದ್ಧ ಅರ್ಜಿ ಊರ್ಜಿತವಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

2 ನೇ ಹೆ ಪಿ ದಿ ನ್ಯಾ ಮತ್ತು ಜೆಎಂಎಫಸಿ
ಧಾರವಾಡ.